ವಿ. ಹೇಮಂತಕುಮಾರ್, ಬೆಂಗಳೂರು
◆ ಮನುಷ್ಯರಂತೆ ಪ್ರಾಣಿ ಪಕ್ಷಿಗಳೂ ಸಹ ಮಾತನಾಡುವಂತಿದ್ದರೆ ಹೇಗಿರುತ್ತಿತ್ತು ಸಾರ್?




ಆಗ ನಿಜವಾದ ಕತ್ತೆಗಳೇ bray king news ಓದುತ್ತಿದ್ದವು.

ಬಾ.ರಂ. ಸುರೇಶ್, ಶಿವಮೊಗ್ಗ
◆ ಒಂದು ವೇಳೆ ದೇವನೇ ಸ್ವತಃ ಚುನಾವಣೆಗೆ ನಿಂತರೆ ಗೆಲ್ಲಬಹುದೆ?
ಊಹೂಂ. ರೆಸಿಡೆನ್ಸ್ ಪ್ರೂಫ್, ಏಜ್ ಪ್ರೂಫ್ ಇಲ್ಲವೆಂದು ನಾಮಿನೇಷನ್ನೇ ತಿರಸ್ಕೃತವಾಗುತ್ತದೆ.

ಗೀತಾಶ್ರೀ, ಬೆಂಗಳೂರು
◆ 'ನಮ್ಮ ಯಜಮಾನರು' ಅಂತಾರಲ್ಲ, ಎಷ್ಟು ಜನರಿಗೆ ಯಜಮಾನ ಆತ?
ಒಬ್ಬರಿಗೇ; ಅದು 'ನಮ್ರ ಯಜಮಾನರು' ಎಂಬುದರ ಅಪಭ್ರಂಶವಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
◆ ಉರಿದು ಮೆರೆದವರೆಲ್ಲಾ ಕೊನೆಗೆ ಸುಟ್ಟು ಬೂದಿ ಆಗಲೇಬೇಕಾ?




ಹಾಗೇನಿಲ್ಲ. ಗೋರಿಯಲ್ಲಿ ಮಲಗಿ ಹುಳುಗಳಿಗೆ ಆಹಾರವೂ ಆಗಬಹುದು.

ಫಾಲನೇತ್ರ ಸಜ್ಜನ, ಶಿರಸಿ
◆ ಸರ್ವೋಚ್ಚ ನ್ಯಾಯಾಲಯ ಅನೈತಿಕ ಸಂಬಂಧ ಅಪರಾಧವಲ್ಲ ಎಂದಿರುವುದು ನೈತಿಕತೆಯ ಅಧೋಗತಿಗೆ ಪ್ರೋತ್ಸಾಹವಲ್ಲವೆ?
ಬಹುಪತ್ನಿತ್ವ ಜಾರಿಯಿದ್ದಾಗ ಎಲ್ಲರೂ ಗೋಡೆ ಹಾರಿದರೇನು? ಸಂಗಾತಿಬದ್ಧತೆ ಕಾನೂನುಬದ್ಧತೆಗಿಂತ ಶ್ರೇಷ್ಠ.

ಎಂ.ಎ. ಕುಮಾರ್, ಬೆಂಗಳೂರು
◆ ದೆವ್ವ ಇದೆ ಎಂದು ನಂಬುವುದು ಹೇಗೆ?
ಅತ್ತೆಸೊಸೆ ಪರಸ್ಪರರ ಬಗ್ಗೆ ಅನ್ಯರೊಡನೆ ಮಾತನಾಡುವಾಗ ಕದ್ದು ಕೇಳಿ, ದೆವ್ವವಿದೆ ಎಂದು ಅವರು ನಂಬಿಸುತ್ತಾರೆ.

ವಿ. ಹಮೀದ್, ವಿಟ್ಲ
◆ ಪತ್ನಿಯನ್ನು ಬೇರೊಬ್ಬ ನೋಡಿದರೆ ಸಿಟ್ಟು ಬರುವುದು ಏಕೆ?
ಮುಂಚೆಯೇ ಅವನೇ ನೋಡಿ ವರಿಸಿದ್ದಿದ್ದರೆ ಕಷ್ಟ ತಪ್ಪುತ್ತಿತ್ತಲ್ಲ. ಇಷ್ಟು ಲೇಟಾಗಿ ನೋಡುತ್ತಿದ್ದಾನೆಂದು ಕೋಪ!

ಮಹಾವೀರ ಕಾಸರ, ಶಿವಮೊಗ್ಗ
◆ ಮದುವೆ ಮತ್ತು ಮೊಬೈಲ್ ಖರೀದಿ ಆದಷ್ಟು ನಿಧಾನವಾಗಿ ಆಗಲಿ ಎನ್ನುವುದೇಕೆ?
ಮಾಸಿಕ ಖರ್ಚು, ಮಾನಸಿಕ ಬೇನೆಗಳನ್ನು ಸಾಧ್ಯವಾದಷ್ಟೂ ದೂರ ಇಡುವುದು ಜಾಣತನ.

ಬೂಕನಕೆರೆ ವಿಜೇಂದ್ರ, ಮೈಸೂರು
◆ ಇಲ್ಲೊಬ್ಬ ಹೆಂಡತಿಯ ಮುಂದೆ ಕೋಲೇಬಸವನಂತೆ ತಲೆ ಆಡಿಸುತ್ತಾನಲ್ಲಾ...?
ಹಾಗೆ ಇರದಿದ್ದರೆ ಹೊರಬಿದ್ದು ಬೀದಿ ಬಸವಣ್ಣ ಆಗಬೇಕಾಗುತ್ತಂತಲ್ಲಾ...

ಟಿ.ಎಂ. ಮಾನಪ್ಪ, ಶಿವಮೊಗ್ಗ
◆ ಭಾರತದಲ್ಲಿರುವಷ್ಟು ದೇವಸ್ಥಾನಗಳು ವಿದೇಶದಲ್ಲೇಕಿಲ್ಲ?
ಕಟ್ಟಡ ಹುಡುಕಬೇಡಿ, ಮನ ಹುಡುಕಿ. ಸರ್ವಧರ್ಮಗಳ ಪ್ರತಿ ಸುಸಂಸ್ಕೃತ ವ್ಯಕ್ತಿಯೂ ಒಂದೊಂದು ದೇಗುಲವೇ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ
◆ ರಾಜಕಾರಣಿಗಳು ಪ್ರಸಾರ ಮಾಧ್ಯಮಗಳ ಮೇಲೆಯೇ ಹರಿಹಾಯುತ್ತಾರಲ್ಲ, ಏಕೆ?
ಮಾಧ್ಯಮಗಳದೇ ತಪ್ಪು 5 ವರ್ಷ ಏಳಬಾರದೆಂದು ಮಲಗಿದವರನ್ನು ಅರೆನಿದ್ರೆಯಲ್ಲಿ ಎಬ್ಬಿಸಿದರೆ ಕೋಪ ಬಾರದಿದ್ದೀತೇ!

ಎಸ್ಸೆನ್ ಮಹಾಬಲರಾವ್, ಎನ್ನಾರ್ ಪುರ
◆ ಪೂಜಾರಿ ಸತ್ತನೆಂದು ದೇವಸ್ಥಾನದಲ್ಲಿ ಪೂಜೆ ಇಲ್ಲವಲ್ಲಾ....?
ಹ್ಞ! ನಿರುಪಯುಕ್ತ ನಾಯಕನೊಬ್ಬ ಸತ್ತರೆ ರಾಜ್ಯಕ್ಕೇ ರಜೆ ಕೊಡುವಾಗ ಇದೇನು ಮಹಾ!

## ಬಹುಮಾನಿತ ಪ್ರಶ್ನೆ

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
◆ ಹೆಂಡತಿ ದೂರದ ಊರಿನಲ್ಲಿದ್ದಾಗ ಮಾತ್ರ ಗಂಡನ ಬಗ್ಗೆ ಅತಿ ಹೆಚ್ಚು ಕಾಳಜಿ ವಹಿಸುತ್ತಾಳೇಕೆ?
ಮುನ್ನೆಚ್ಚರಿಕೆ ಕ್ರಮ. ಪತಿ ಎಡವಟ್ಟು ಮಾಡಿಕೊಂಡರೆ ಬಂದಮೇಲೆ ತನಗೇ ಎಕ್ಸ್‌ಟ್ರಾ ಕೆಲಸ ಬೀಳುವುದಲ್ಲ!

ಕುಮಾರ ಚಲವಾದಿ, ಹಾಸನ
◆ ಮದುವೆಗೆ ಮುಂಚೆ ಪ್ರೇಯಸಿಯ ಎಲ್ಲ ಬೇಡಿಕೆಗಳನ್ನೂ ಪೂರೈಸುತ್ತೇವೆ. ನಂತರ ಅದು ಏಕೆ ಸಾಧ್ಯವಾಗುವುದಿಲ್ಲ?
ಹೆಂಡತಿ ಅಡ್ಡಿ ಮಾಡುವಳಲ್ಲ!

ನರಸಿಂಹ ಪೈ, ಕಾಸರಕೋಡ
◆ ಚುನಾವಣಾ ಕಣದಲ್ಲಿ ಮಹಿಳಾ ಅಭ್ಯರ್ಥಿಗಳು ಹೆಚ್ಚಾಗಲು ಕಾರಣವೇನು?
ಮಹಿಳೆಯರಿಗೆ ಹೆಚ್ಚು ಫಾಲೋವರ್ಸ್ ಇರುತ್ತಾರಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
◆ ಅಚ್ಚರಿ, ಅದ್ಭುತ, ಸೋಜಿಗ ಇವುಗಳಿಗೆ ಇರುವ ವ್ಯತ್ಯಾಸವೇನು?



ಎಜುಕೇಟೆಡ್ ಜನ ಎಲೆಕ್ಷನ್ ದಿನ ಪಿಕ್ನಿಕ್ ಹೋಗದಿದ್ದರೆ ಅಚ್ಚರಿ; ಮತ ಹಾಕಿದರೆ ಅದ್ಭುತ; ಅನ್ಯರಿಂದ ಹಾಕಿಸಿದರೆ ಸೋಜಿಗ!

ಬಿ. ಚಂದ್ರೇಗೌಡ, ಬೆಂಗಳೂರು
◆ ಮದುವೆಯಾದವನನ್ನು ಬೋನಿಗೆ ಬಿದ್ದ ಎನ್ನುತ್ತಾರಲ್ಲ, ಏಕೆ?
ರಿಸೆಪ್ಷನ್‌ಗೆ ಬಂದವರು ಅವನನ್ನು ಮೃಗಾಲಯದ ಪ್ರಾಣಿಯಂತೆ ನೋಡುವುದರಿಂದ.

ವ. ಉಮೇಶ ಕಾರಂತ, ಮಂಗಳೂರು
◆ 'ಸ್ವಚ್ಛ ಭಾರತ' ಸ್ವಚ್ಛವಾಯಿತೆ?
ಕಾಲಿಗಂಟುವ ಹೊಲಸೇನೋ ಕಡಿಮೆಯಾಗಿದೆ; ಈಗ ನಾಲಿಗೆಯ ಹೊಲಸಿನದೇ ದೊಡ್ಡ ಸಮಸ್ಯೆ.

■ ರಾಮ್